APRIL 07, 2025
AKASHAVANI - DHARWAD
PRADESH SAAMACHARA (KANNADA) 12.00 P.M.

<><><>

ಬಸವ ಜಯಂತಿ ನಿಮಿತ್ತ, ಇದೇ 29 ಹಾಗೂ 30 ರಂದು, ಭಕ್ತಿ ಭಾಂಡಾರಿ ಬಸವಣ್ಣನವರ, ಐಕ್ಯ ಸ್ಥಳ, ಬಾಗಲಕೋಟೆ ಜಿಲ್ಲೆ, ಕೂಡಲ ಸಂಗಮದಲ್ಲಿ, 'ಅನುಭವ ಮಂಟಪ; ಬಸವಾದಿ ಶರಣರ ವೈಭವ' ಕಾರ್ಯಕ್ರಮ, ಜರುಗಲಿದೆ ಎಂದು, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ ತಿಳಿಸಿದ್ದಾರೆ. ಕೂಡಲ ಸಂಗಮದ ಅಭಿವೃದ್ಧಿ ಪ್ರಾಧಿಕಾರದ ಸಭಾಭವನದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ.ತಿಮ್ಮಾಪೂರ ಅವರೊಂದಿಗೆ, ಸುದ್ದಿಗೋಷ್ಠಿ ನಡೆಸಿ, ಅವರು ಈ ವಿಷಯ ತಿಳಿಸಿದರು.

ಶಿವರಾಜ ತಂಗಡಗಿ ಧ್ವನಿ 30 ಸೆಕೆಂದುಗಳು

<><><>

ರಾಜ್ಯದಲ್ಲಿ ಪ್ರಸಕ್ತ ವರ್ಷ 75 ಹಾಗೂ 2026 ರಲ್ಲಿ, 100 ಹೊಸ ವಿದ್ಯುತ್ ಉಪ ಕೇಂದ್ರಗಳನ್ನು, ಸ್ಥಾಪಿಸಲಾಗುವುದು ಎಂದು, ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ. ಚಿಕ್ಕಮಗಳೂರು ಜಿಲ್ಲೆ, ತರೀಕೆರೆ ಪಟ್ಟಣದಲ್ಲಿ, 'ಸರ್ಕಾರದ ನಡೆ, ಕಾರ್ಯಕರ್ತರ ಕಡೆ' ಕಾಂಗ್ರೆಸ್ ಪಕ್ಷದ ಕಾರ್ಯಕ್ರಮದಲ್ಲಿ ಪಾಲ್ಗೊಂಡು, ಮಾತನಾಡಿದ ಅವರು, ರಾಜ್ಯದ ಹಲವೆಡೆ, ವಿದ್ಯುತ್ ಉಪ ಕೇಂದ್ರಗಳನ್ನು ಸ್ಥಾಪಿಸಿ, ಸೌರ ವಿದ್ಯುತ್ ವ್ಯವಸ್ಥೆ ಅಳವಡಿಸಿ, ಭವಿಷ್ಯದಲ್ಲಿ ವಿದ್ಯುತ್ ಕೊರತೆ ಸಮಸ್ಯೆ, ಎದುರಾಗದಂತೆ ಕ್ರಮ ವಹಿಸಲಾಗುವುದು ಎಂದರು. ರಾಜ್ಯದಲ್ಲಿ ಬೇಸಿಗೆ ಹಿನ್ನೆಲೆ, ವಿದ್ಯುತ್ ಬೇಡಿಕೆ ಹೆಚ್ಚಿದೆ. ಕೃಷಿಗೆ 18 ರಿಂದ 19 ಸಾವಿರ ಮೆಗಾ ವ್ಯಾಟ್ ವಿದ್ಯುತ್ ಅಗತ್ಯವಿದೆ ಎಂದು, ಸಚಿವ ಜಾರ್ಜ್ ಹೇಳಿದರು.

<><><>

ಆಕಾಶವಾಣಿಯ ನಿವೃತ್ತ ಸುದ್ದಿ ಸಂಪಾದಕಿ, ನಾಗಮಣಿ ಎಸ್.ರಾವ್ ಅವರ ಆತ್ಮಕಥೆ, 'ಸುದ್ದಿ ಸಂಗಾತಿಯ ಸ್ವಗತ'ವನ್ನು, ಹಿರಿಯ ಸಾಹಿತಿ ಹಾಗೂ ಅವರ ಸಹಪಾಠಿ, ಹಂ.ಪ.ನಾಗರಾಜಯ್ಯ, ಬೆಂಗಳೂರಿನ ಬಿ.ಎಂ.ಶ್ರೀಕಂಠಯ್ಯ ಸಭಾಂಗಣದಲ್ಲಿ, ಬಿಡುಗಡೆ ಮಾಡಿದರು. ಮಾಧ್ಯಮ ಅಕಾಡೆಮಿ ಅಧ್ಯಕ್ಷೆ ಆಯೇಷಾ ಖಾನಂ, ಮಾತನಾಡಿ, ನಾಡಿನ ಹಿರಿಯ ಪತ್ರಕರ್ತೆ ನಾಗಮಣಿ ಅವರ ಆತ್ಮಕಥೆಯನ್ನು, ಇಂಗ್ಲಿಷ್ ಭಾಷೆಗೆ ತರ್ಜುಮೆ ಮಾಡಿ, ಕನ್ನಡೇತರ ಓದುಗರಿಗೂ ಅವರ ಅನುಭವ ದಕ್ಕುವಂತೆ ಮಾಡಲಾಗುವುದು ಎಂದರು. ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ, ಶಿವಾನಂದ ತಗಡೂರ ಸೇರಿದಂತೆ, ಅನೇಕ ಗಣ್ಯರು, ನಾಗಮಣಿ ಎಸ್. ರಾವ್ ಅವರನ್ನು ಅಭಿಮಾನದಿಂದ ಸತ್ಕರಿಸಿದರು.

<><><>

ಮಂಡ್ಯದಲ್ಲಿ ಜರುಗಿದ, 87 ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕಾಗಿ, ಸಂಗ್ರಹಿಸಿದ್ದ ಹಣದಲ್ಲಿ, 2 ಕೋಟಿ 53 ಲಕ್ಷ 16 ಸಾವಿರದ 166 ರೂಪಾಯಿ ಉಳಿದಿದೆ ಎಂದು, ಜಿಲ್ಲಾಧಿಕಾರಿ ಡಾಕ್ಟರ್ ಕುಮಾರ ತಿಳಿಸಿದ್ದಾರೆ. ಸಮ್ಮೇಳನಕ್ಕಾಗಿ ಒಟ್ಟು, 32 ಕೋಟಿ, 74 ಲಕ್ಷ, 89 ಸಾವಿರದ 958 ರೂಪಾಯಿ ಸಂಗ್ರಹವಾಗಿತ್ತು. ಆ ಪೈಕಿ, 29 ಕೋಟಿ 65 ಲಕ್ಷ 7 ಸಾವಿರದ 266 ರೂಪಾಯಿ ಖರ್ಚಾಗಿದೆ ಎಂದು, ತಿಳಿಸಿದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಉಳಿಕೆ ಹಣದ ಜತೆ ಇನ್ನಷ್ಟು ಹಣ ಸೇರಿಸಿ, ಭವ್ಯವಾದ ಕನ್ನಡ ಭವನ ನಿರ್ಮಿಸಲಾಗುವುದು, ಎಂದರು.

<><><>

ಕಾರವಾರ ಜಿಲ್ಲೆಯ, ಪ್ರವಾಸಿ ತಾಣಗಳನ್ನು ಪ್ರಚುರ ಪಡಿಸಲು, 'Discover the  Beauty of india' ಶೀರ್ಷಿಕೆಯಡಿ 'Dekho Apna Desh Photo Contest' ಸ್ಪರ್ಧೆ ಏರ್ಪಡಿಸಲಾಗಿದೆ. ವಿಶೇಷ ಸ್ಮಾರಕಗಳು, ವನ್ಯಜೀವಿ, ಗ್ಲೋಬಲ್ ಇಂಡಿಕೇಶನ್ ಟ್ಯಾಗ್ ಹೊಂದಿರುವ, ಕರಕುಶಲ ಮತ್ತು ಕೈಮಗ್ಗ, ಭೂಮಿಯ ದೃಶ್ಯ, ಸಾಹಸ ಪ್ರವಾಸೋದ್ಯಮ ವಿಭಾಗಗಳಲ್ಲಿ, ಅತ್ಯುತ್ತಮ ಛಾಯಾಚಿತ್ರಗಳನ್ನು, Dekho'apna desh' photos'@gmail.com ಗೆ ಕಳುಹಿಸಲು, ಇಂದು ಕೊನೆ ದಿನ ಎಂದು, ಕೇಂದ್ರ ಪ್ರವಾಸೋದ್ಯಮ ಇಲಾಖೆ ಪ್ರಕಟಿಸಿದೆ.

<><><>

ಕರ್ನಾಟಕ ತೆರೆದ ಸ್ಥಳಗಳ, ವಿರೂಪಗೊಳಿಸುವಿಕೆ ತಡೆಗಟ್ಟುವಿಕೆ ಕಾಯ್ದೆ 1981ರ ನಿಯಮದಡಿ, ಸಾರ್ವಜನಿಕ ಕಟ್ಟಡ ಹಾಗೂ ಕಚೇರಿಗಳಲ್ಲಿ ಅನಧಿಕೃತ ಭಿತ್ತಿ ಪತ್ರಗಳನ್ನು ಅಂಟಿಸುವಂತಿಲ್ಲ; ಕೂಡಲೇ ತೆರವುಗೊಳಿಸಲು, ಕ್ರಮ ಕೈಗೊಳ್ಳುವುದಾಗಿ, ದಾವಣಗೆರೆ ಜಿಲ್ಲಾಧಿಕಾರಿ ಜಿ.ಎಂ.ಗಂಗಾಧರಸ್ವಾಮಿ, ತಿಳಿಸಿದ್ದಾರೆ. ನಗರದ ಅಂದಗೆಡಿಸುವಂತೆ, ಅಂಟಿಸಿರುವ ಭಿತ್ತಿ ಪತ್ರಗಳು ಹಾಗೂ ಜಾಹಿರಾತುಗಳನ್ನು, ಕೂಡಲೇ ತೆರವುಗೊಳಿಸುವಂತೆ, ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

<><><>

ಮಂಗಳೂರಿನ, ಉರ್ವ ಮಾರ್ಕೆಟ್‌ನಲ್ಲಿ ನಿರ್ಮಾಣಗೊಳ್ಳುತ್ತಿರುವ, ಒಳಾಂಗಣ  ಕ್ರೀಡಾಂಗಣದ ಕಾಮಗಾರಿಯನ್ನು, ಇದೇ 15 ರೊಳಗೆ ಪೂರ್ಣಗೊಳಿಸುವಂತೆ, ಜಿಲ್ಲಾ ಉಸ್ತುವಾರಿ ಸಚಿವ ದಿನೇಶ ಗುಂಡೂರಾವ ಜಿಲ್ಲಾಧಿಕಾರಿಗಳಿಗೆ ಸೂಚಿಸಿದ್ದಾರೆ.

<><><>

ವಿಜಯಪುರ ಜಿಲ್ಲೆಯ, 23 ಜನ ಮೀನುಗಾರರಿಗೆ, ತಲಾ 30 ಸಾವಿರ ರೂಪಾಯಿ, ಸಹಾಯ ಧನದ ಚೆಕ್‌ನ್ನು, ಜಿಲ್ಲಾ ಉಸ್ತುವಾರಿ ಸಚಿವ ಎಂ.ಬಿ.ಪಾಟೀಲ, ನೀಡಿದರು.

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.
ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ.